(ಇಂದು ದಿನಾಂಕಃ 22–08–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀಸವಾಲು ಃ ಶ್ರೀಮತಿ ಎಸ್ ಎಂ ಪಿ ವಕೀಲರಿಂದ ಃ -

8) ದರಕಾಸ್ತು ಅರ್ಜಿ ಸಂಖ್ಯೆ 120/1992 ರಲ್ಲಿ ನನ್ನ ತಂದೆಯವರ ಮರಣದ ನಂತರ ನಾವು ಹಾಜರಾಗಿ ತಕರಾರು ಸಲ್ಲಿಸಿಲ್ಲ. ನನ್ನ ಸಹೋದರ-ಸಹೋದರಿಯರು ಸಹ ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸರಿ. ಸದರಿ ಪ್ರಕರಣದ ಎಲ್ಲಾ ದೃಡಿಕೃತ ಪ್ರತಿಗಳನ್ನು ಹಾಜರು ಪಡಿಸಿರುತ್ತೇನೆ. ದರಕಾಸ್ತು ಅರ್ಜಿ ಸಂಖ್ಯೆ 120/1992 ರಲ್ಲಿ ಹರಾಜಲ್ಲಿ ಮಾರಾಟವಾದ ಬಗ್ಗೆ ದಾಖಲೆಗಳ ದೃಡಿಕೃತ ಪ್ರತಿಯನ್ನು ಹಾಜರು ಪಡಿಸಿಲ್ಲ ಕಾರಣ ಅದು ಮೋಸದಿಂದ ಆಗಿರುತ್ತದೆ. ನಾನು ನನ್ನ ಸಂಪೂರ್ಣ ಶಿಕ್ಷಣವನ್ನು ನವಲಗುಂದದಲ್ಲಿ ಮಾಡಿರುತ್ತೇನೆ.

9) ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಅದು ದರಕಾಸ್ತು ಅರ್ಜಿ ಸಂಖ್ಯೆ 120/1992 ರಲ್ಲಿಯ ಒಂದು ದಾಖಲೆಯಾಗಿದ್ದು ಅದನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಅದನ್ನು ಪರಿಶೀಲಿಸಿ, ಸಾಕ್ಷಿಯು ಸದರಿ ಪ್ರಕರಣದಲ್ಲಿ ನಾನು ಹಾಜರಾಗಿದ್ದೆ ಇರುವುದಿಲ್ಲ ಅದನ್ನು ನಾನು ಹಾಜರು ಮಾಡುವ ಪ್ರಶ್ನೆ ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯು ದರಕಾಸ್ತು ಅರ್ಜಿ ಸಂಖ್ಯೆ 120/1992 ರಲ್ಲಿಯ ದಿನಾಂಕ 22-06-1995 ರ ಒಂದು ಆಸ್ತಿ ವರ್ಣನೆಯ ದೃಡಿಕೃತ ದಾಖಲೆಯಾಗಿದ್ದು ಅದನ್ನು **ನಿ.ಪಿ.17** ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ದರಕಾಸ್ತು ಅರ್ಜಿ ಸಂಖ್ಯೆ 120/1992 ರಲ್ಲಿಯ ದಿನಾಂಕ 22-06-1995 ರ ಒಂದು ಪಂಚದಸ್ತು ದೃಡಿಕೃತ ದಾಖಲೆಯಾಗಿದ್ದು ಅದನ್ನು **ನಿ.ಪಿ.18** ಎಂದು ಗುರುತಿಸಲಾಯಿತು.

10) ಸಾಕ್ಷಿಗೆ ಈಗ ನಿಡಿ-9 ದರಕಾಸ್ತು ಅರ್ಜಿ ಸಂಖ್ಯೆ 120/1992 ರ ರೋಜನಾಮೆಯ ದಿನಾಂಕ 14-07-1995 ರ ದಿನದ ಆದೇಶವನ್ನು ತೋರಿಸಿ ಅದರಲ್ಲಿ ಆಸ್ತಿಯನ್ನು ಹರಾಜು ಮಾಡಬೇಕೆಂದು ಆದೇಶವಾಗಿ ದಿನಾಂಕ 07-07-1995 ರಂದು ಟಂಟಂ ಬಾರಿಸಿದ ಒಂದು

ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯ ದೃಡಿಕೃತ ಪ್ರತಿಯನ್ನು **ನಿ.ಪಿ.19** ಎಂದು ಗುರುತಿಸಲಾಯಿತು.

11) ದರಕಾಸ್ತು ಪ್ರಕರಣದಲ್ಲಿ ಒಟ್ಟು ಆಸ್ತಿಗೆ ಖರೀದಿದಾರರು ಸಿಗದೇ ಇದ್ದ ಕಾರಣ ವಾದಿಯ ತಂದೆಯವರು ತನಗೆ ಬರುವ ಹಣಕ್ಕೆ ಸಮಾನವಾದ ಆಸ್ತಿಯ ಭಾಗವನ್ನು ಮಾರಾಟ ಮಾಡಲು ಕೋರಿದ್ದು ಅದರ ಪ್ರಕಾರ ದಿನಾಂಕ 19-01-1996 ರಂದು ಆಸ್ತಿಯ ಭಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಅದು ಮೋಸದಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯ ದೃಡಿಕೃತ ಪ್ರತಿಯನ್ನು **ನಿ.ಪಿ.20** ಎಂದು ಗುರುತಿಸಲಾಯಿತು. ಆಸ್ತಿಯು ಕಾನೂನು ಪ್ರಕಾರ ಹರಾಜನಲ್ಲಿ ಮಾರಾಟವಾಗಿದ್ದು ನಾನು ಮೋಸದಿಂದ ಆಗಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

12) ನಾನು ಹಾಗೂ ನನ್ನ ತಂದೆಯವರು ಹರಾಜ ಪ್ರಕ್ರಿಯೆ ವಿರುಧ್ದ ಯಾವುದೇ ದಾವೆ, ಮೇಲ್ಮನವಿ ಅಥವಾ ಅರ್ಜಿಯನ್ನು ಸಲ್ಲಿಸಿಲ್ಲ. ಮಾರಾಟವಾದ ಹೊಲದ ಮಾರುಕಟ್ಟೆ ಬೆಲೆಯನ್ನು ನಾವು ತುಂಬುತ್ತೇವೆ ಹೊಲವನ್ನು ನಮಗೆ ಮರಳಿ ನೀಡಬೇಕೆಂದು ಕೋರಿ ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ.

13) ಎಸ್ ಬಿ ಐ ನವಲಗುಂದ ಶಾಖೆ ರವರು ಹರಾಜನಲ್ಲಿ ಮಾರಾಟವಾದ ಆಸ್ತಿಯ ಹಣ ತಮ್ಮ ಬ್ಯಾಂಕಿಗೆ ಪಾವತಿಯಾಗಿರುತ್ತದೆ ಆದಕಾರಣ ಖರೀದಿ ಪ್ರಮಾಣ ಪತ್ರ ನೀಡಲು ಯಾವುದೇ ತಕರಾರು ಇರುವುದಿಲ್ಲವೆಂದು ಮೇಮೊ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ನಿಡಿ-9 ರ ದಿನಾಂಕ 22-06-2002 ರ ಆದೇಶವನ್ನು ತೋರಿಸಿ ಅದರಲ್ಲಿ 2 ನೇ ವಾದಿಯ ತಂದೆಯವರು ಖರೀದಿ ಆದ ಆಸ್ತಿಯ ಕಬ್ಜಾ ಹಾಗೂ ಖರೀದಿ ಪ್ರಮಾಣ ಪತ್ರ ನೀಡಲು ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲಾ. ಅಂದಿನಿಂದ ಇಲ್ಲಿಯವರೆಗೆ 2 ನೇ ವಾದಿಯ ತಂದೆ ಅವರ ಜೀವಿತ ಅವಧಿಯಲ್ಲಿ ನಂತರ ವಾದಿ ಸದರಿ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯ ನಂತರ ನಾವು ವಹಿವಾಟಿನಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ.

14) 2 ನೇ ವಾದಿಯ ತಂದೆಯಾದ ಶಂಕರಪ್ಪ ರವರು ತಮ್ಮ ಅನಾರೋಗ್ಯದ ಕಾರಣ 2006 ರಿಂದ 2011 ರವರೆಗೆ ದರಕಾಸ್ತು ಅರ್ಜಿ ಸಂಖ್ಯೆ 120/1992 ರಲ್ಲಿ ಹಾಜರಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಪಿ-12 ನ್ನು ತೋರಿಸಿ ಅದು ಶಂಕರಪ್ಪ ರವರು 2011 ರಲ್ಲಿ ದರಕಾಸ್ತು ಅರ್ಜಿ ಸಂಖ್ಯೆ 120/1992 ರಲ್ಲಿ ಪಡೆದ ಮಾರಾಟ ಪ್ರಮಾಣ ಪತ್ರ ಎಂದರೆ ನನಗೆ ಗೊತ್ತಿಲ್ಲ ಅದು ಮೋಸದಿಂದ ಆಗಿರುತ್ತದೆ. 2 ನೇ ವಾದಿಯ ಕಬ್ಜಾ ವಹಿವಾಟಿಗೆ ತೊಂದರೆ ಮಾಡಬೇಕೆಂದು 2014 ರಲ್ಲಿ ನಾನು ಸುಳ್ಳು ದೂರನ್ನು ಹಾಕಿರುತ್ತೇನೆ ಅಂದರೆ ಸರಿಯಲ್ಲ. ಪೊಲೀಸರು ದೂರನ್ನು ಹಾಗೂ ದಾಖಲೆಗಳನ್ನು ಪರಿಶೀಲನೆ ಮಾಡಿ ನನ್ನ ದೂರನ್ನು ಪರಿಗಣನೆ ಮಾಡಿಲ್ಲ ಅಂದರೆ ಸರಿಯಲ್ಲ.

15) ನಾನು ಮಾನ್ಯ ಇದೇ ನ್ಯಾಯಾಲಯದಲ್ಲಿ ಖಾಸಗಿ ದೂರು ಸಂಖ್ಯೆ 04/2013 ನ್ನು 2 ನೇ ವಾದಿಯ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದೂರಿನ ಸನ್ನತೆಯನ್ನು ಮಾನ್ಯ ನ್ಯಾಯಾಲಯ ಮಾಡಿದ ಮೇಲೆ ಅದು ಸಿಸಿ ಸಂಖ್ಯೆ 266/2014 ಎಂದು ದಾಖಲಾಗಿರುತ್ತದೆ ಎಂದರೆ ಪ್ರಕರಣ ದಾಖಲಾಗಿದ್ದು ಗೊತ್ತಿರುತ್ತದೆ ಆದರೆ ಸಂಖ್ಯೆ ಗೊತ್ತಿಲ್ಲ. ಖಾಸಗಿ ದೂರು ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಖಾಸಗಿ ದೂರಿನಲ್ಲಿ ಏನಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಖಾಸಗಿ ದೂರಿನಲ್ಲಿ ನಿಪಿ-10 ರಂತೆ ಪೊಲೀಸರು ಬಿ ಅಂತಿಮ ವರದಿ ಸಲ್ಲಿಸಿದ್ದು ನಾನು ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

16) ಸಾಕ್ಷಿಗೆ ಈಗ ತಮ್ಮ ಪ್ರತಿವಾದ ಪತ್ರದ 20 ನೇ ಕಂಡಿಕೆಯನ್ನು ತೋರಿಸಿ ಅದರಲ್ಲಿ ಬಿ ಅಂತಿಮ ವರದಿ ಬಗ್ಗೆ ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ತಮ್ಮ ಪ್ರತಿವಾದ ಪತ್ರದ 16 ನೇ ಕಂಡಿಕೆಯನ್ನು ತೋರಿಸಿ ಅದರಲ್ಲಿ ವಿಷಯವನ್ನು ಯಾರು ಬರೆಸಿರುತ್ತಾರೆ ಎಂದರೆ ಸಾಕ್ಷಿಯು ಸಂಮಜಸವಾದ ಉತ್ತರ ನೀಡುತ್ತಿಲ್ಲ. ವಾದಿಯು ದಾವಾ ಆಸ್ತಿಯ ವಿಸ್ತೀರ್ಣ ಎಷ್ಟು ತೋರಿಸಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು 20 ಎಕ್ರೆ ತೋರಿಸಿರಬಹುದು ಸಂಪೂರ್ಣ ಆಸ್ತಿಗೆ ನಾನೇ ಕಬ್ಜೆಯಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ನಾನೇ ಕಬ್ಜೆಯಲ್ಲಿ ಇದ್ದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ.

17) ಮೋಸದಿಂದ ಆಗಿರುತ್ತದೆ ಎಂದು ಹೇಳಿ ಅದರ ವಿರುದ್ಧ ದಾವೆಯನ್ನು ಇದೇ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ. ಸಾಕ್ಷಿಗೆ ಪ್ರತಿವಾದ ಪತ್ರದ 14 ನೇ ಕಂಡಿಕೆಯನ್ನು ತೋರಿಸಿ ಅದು ನಾನೇ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ದಾವೆಯನ್ನು ನಾವು 2 ನೇ ವಾದಿಯ ದಾವಾ ಆಸ್ತಿಯ ಕಬ್ಜಾ ವಹಿವಾಟಿಗೆ ಹರಕತ ಮಾಡಿದ ಕಾರಣ ಸಲ್ಲಿಸಿರುತ್ತಾರೆ ಅಂದರೆ ಸರಿಯಲ್ಲ. ದಾವಾ ಕಾರಣ ಗೊತ್ತಿಲ್ಲ.

18) ನಾನು ವಾದಿಯರ ಕಬ್ಜಾ ವಹಿವಾಟಿಗೆ ತೊಂದರೆ ನೀಡುವ ಪ್ರಶ್ನೆ ಬರುವುದಿಲ್ಲ ಕಾರಣ ಅವರು ಕಬ್ಜಾವಹಿವಾಟಿನಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಕಬ್ಜಾ ವಹಿವಾಟಿನಲ್ಲಿ ಇಲ್ಲದೇ ಇದ್ದರೆ ದೂರು ಏಕೆ ನೀಡಿರುತ್ತೀರಿ ಎಂದರೆ ಸಾಕ್ಷಿಯು ವಾದಿಯು ಇದು ಇದೆ ಎಂದು ನೀಡಿದ ಕಾರಣ ನಾನು ದೂರು ನೀಡಿರುತ್ತೇನೆ ಎಂದು ನುಡಿಯುತ್ತಾರೆ.

19) ದರಕಾಸ್ತು ಅರ್ಜಿ ಸಂಖ್ಯೆ 120/1992 ರಲ್ಲಿ ವಾದಿಯ ತಂದೆಯಾದ ಶಂಕರಪ್ಪ ರವರು ನ್ಯಾಯಾಲಯದಿಂದ ದಾವಾ ಆಸ್ತಿಯ ಮಾರಾಟ ಪ್ರಮಾಣ ಪತ್ರವನ್ನು ಪಡೆದು ಅದರ ಕಬ್ಜಾ ವಹಿವಾಟಿನಲ್ಲಿ ಇದ್ದರು ಸಹ ನಾವು ಅವರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದೂರುಗಳನ್ನು ಸಲ್ಲಿಸುತ್ತಾ ಬಂದಿರುತ್ತೇವೆ ಅಂದರೆ ಸರಿಯಲ್ಲ.

20) 2013 ಹಾಗೂ 2014 ರಲ್ಲಿ ನಾನು 2 ನೇ ವಾದಿ ಹಾಗೂ ಆತನ ತಾಯಿಯ ವಿರುದ್ಧ ವಕೀಲರ ಮೂಲಕ ಕೆವಿಯೆಟ್ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಕೆವಿಯೆಟ್ ಪ್ರತಿಯನ್ನು **ನಿ.ಪಿ.21** ಎಂದು ಹಾಗೂ ಅದರ ಲಕೋಟೆಯನ್ನು ನಿ.ಪಿ.21(ಎ) ಎಂದು ಗುರುತಿಸಲಾಯಿತು. ಕೆವಿಯೆಟ ಕಾರಣ ಗೊತ್ತಿರುತ್ತದೆ. ಬೆಳವಟಗಿಯ ಆಸ್ತಿಯನ್ನು ಹೊರತು ಪಡಿಸಿ ನನ್ನ ಕುಟುಂಬದ 16 ಎಕ್ರೆ ಆಸ್ತಿಯು ನವಲಗುಂದದಲ್ಲಿ ಇರುತ್ತದೆ. ಸದರಿ ಆಸ್ತಿಯ ಉಳುಮೆಯನ್ನು ಆಳುಗಳ ಮುಖಾಂತರ ಮಾಡುತ್ತೇನೆ.

21) ನವಲಗುಂದದಲ್ಲಿ ನಮ್ಮ ಮನೆತನವು ಪ್ರತಿಸ್ಥಿತ ಮನೆತನ ಎಂದರೆ ಸರಿ. ನವಲಗುಂದದ ಇತರ ರಾಜಕೀಯವಾಗಿ ಬಲ ಹೊಂದಿದ ವ್ಯಕ್ತಿಗಳ ಸಂಗಡ ನಮ್ಮ ಮನೆತನದ ಒಡನಾಟ ಇರುತ್ತದೆ ಎಂದರೆ ಸರಿ. ವಾದಿಯರು ವೃತ್ತಿಯಲ್ಲಿ ಸಮಗಾರ ಎಂದರೆ ನನಗೆ ಗೊತ್ತಿದೆ. 2 ನೇ ವಾದಿಯು ಕೂಲಿ ಮಾಡಿ ಜೀವನ ಸಾಗಿಸುತ್ತಾ ಬಂದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

ವಾದಿಯರು ರಾಜಕೀಯವಾಗಿ ಹಾಗೂ ಜಾತಿಯಲ್ಲಿ ಪ್ರಭಾವ ಉಳ್ಳ ವ್ಯಕ್ತಿ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

22) ವಾದಿಯ ವಿರುದ್ಧ ನಾನು ದೂರು ನೀಡಿದರೆ ಆತನು ಬಗ್ಗಿ, ಹೆದರಿ ದಾವಾ ಆಸ್ತಿಯನ್ನು ತೊರೆದು ಹೋಗುತ್ತಾನೆ ಎಂದು ಆತನ ವಿರುದ್ಧ ಸುಳ್ಳು ದೂರುಗಳನ್ನು ನೀಡುತ್ತಾ ಬಂದಿರುತ್ತೇನೆ ಅಂದರೆ ಸರಿಯಲ್ಲ. ವಾದಿಯರು ದಾವಾ ಆಸ್ತಿಯಲ್ಲಿ ವಹಿವಾಟು ಮಾಡಿದರೆ ನನಗೆ ಏನು ತೊಂದರೆ ಇಲ್ಲಾ ಅಂದರೆ ಸರಿಯಲ್ಲ. ನಾನು ತಕರಾರು ಮಾಡಿದ ಕಾರಣ ವಾದಿಯರ ಕಬ್ಜಾ ವಹಿವಾಟಿಗೆ ತೊಂದರೆಯಾಗುತ್ತಿದೆ ಅಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇಲ್ಲಾ ಅಂದರೆ ಸರಿಯಲ್ಲ.

23) ಕರೋನಾ ಸಮಯದ ನಂತರದಲ್ಲಿ 2 ನೇ ವಾದಿಯು ದುಡಿಮೆಗೆ ಎಂದು ಪರ ಊರಿಗೆ ಹೋಗಿದ್ದು ಈಗ 2022 ರಲ್ಲಿ ಮರಳಿ ದಾವಾ ಆಸ್ತಿಯ ಉಳುಮೆಗೆ ಬಂದ ಸಮಯದಲ್ಲಿ ನಾನು ಆತನಿಗೆ ಹರಕತ್ತ ಮಾಡಿದ ಕಾರಣ ದಾವೆ ಹೂಡಿರುತ್ತಾನೆ ಅಂದರೆ ಸರಿಯಲ್ಲ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹೊಲಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯರು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿದ್ದು ಅವರಿಗೆ ನನ್ನ ವಿರುದ್ಧ ತಡೆಯಾಜ್ಞೆ ಪಡೆಯಲು ಕಾನೂನು ಅರ್ಹತೆ ಇರುತ್ತದೆ ಅಂದರೆ ಸರಿಯಲ್ಲ. ನಾನು ಸುಳ್ಳು ಸಂಗತಿಗಳನ್ನು ಕಾಣಿಸಿ, ಎಲ್ಲಾ ದಾಖಲೆಗಳನ್ನು ಮಾನ್ಯ ನ್ಯಾಯಾಲಯದಲ್ಲಿ ಹಾಜರು ಪಡಿಸದೇ, ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**